## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 414
2. ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ್ ನಾಯಕ್.ಕೆ.
3. ಉತ್ತರಿಸುವ ದಿನಾಂಕ : 13/08/2025
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿನ ನ್ಯಾಯಾಲಯದ ಸಂಕೀರ್ಣ ಕಟ್ಟಡ ನಿರ್ಮಾಣ ಹಾಗೂ ಪೀಠೋಪಕರಣಗಳ ಪೂರೈಕೆ ಕಾಮಗಾರಿಗೆ ರೂ.13.92 ಕೋಟಿ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡುವ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ: | ಬೆಳ್ತಂಗಡಿ ತಾಲ್ಲೂಕಿನ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣಕ್ಕಾಗಿ ರೂ.9.00 ಕೋಟಿ ಅನುದಾನವನ್ನು 2024-25ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ-4059-80-051-0-32-386-ನ್ಯಾಯಾಲಯ ಕಟ್ಟಡಗಳು ಅಡಿಯಲ್ಲಿ ಮಂಜೂರು ಮಾಡಲಾಗಿದೆ. |
| ಆ) | ಯಾವ ಕಾಲಮಿತಿಯೊಳಗೆ ಪೂರ್ಣ ಮೊತ್ತದ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು: | ಸದರಿ ಕಾಮಗಾರಿಗೆ ರೂ.9.00 ಕೋಟಿ ಅನುದಾನ ಮಂಜೂರಾಗಿದ್ದು, ಅನುದಾನಕ್ಕೆ ಅನುಗುಣವಾಗಿ ವಿನ್ಯಾಸ ನಕ್ಷೆಯೊಂದಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ನಿಯಮಾನುಸಾರ ಗುತ್ತಿಗೆ ವಹಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತದೆ. |
| ಇ) | ಸಾರ್ವಜನಿಕ ಹಿತದೃಷ್ಟಿ ಕೂಡಿರುವ ಸದರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಿ, ಲೋಕಾರ್ಪಣೆಗೊಳಿಸಲಾಗುವುದು? | ಸದರಿ ಕಟ್ಟಡದ ನಕ್ಷೆಯನ್ನು ಪಡೆಯಲು ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ವತಿಯಿಂದ ಮುಖ್ಯವಾಸ್ತುಶಿಲ್ಪಿಯವರಿಗೆ ಶಿಫಾರಸ್ಸು ಪ್ರಸ್ತಾವನೆ ಸಲ್ಲಿಸುವಂತೆ ಕೋರಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು, ಮಂಗಳೂರು ಇವರನ್ನು ಕೋರಲಾಗಿದೆ.<br><br>ಮುಖ್ಯ ವಾಸ್ತುಶಿಲ್ಪಿಯವರಿಂದ ನಕ್ಷೆಯನ್ನು ಪಡೆದುಕೊಂಡು, ಪ್ರಸ್ತುತ ಒದಗಿಸಿರುವ ರೂ.9.00 ಕೋಟಿಗಳ ಅನುದಾನಕ್ಕೆ ಅನುಗುಣವಾಗಿ ವಿನ್ಯಾಸ ನಕ್ಷೆಯೊಂದಿಗೆ ಅಂದಾಜುಪಟ್ಟಿಯನ್ನು ತಯಾರಿಸಿ. ನಿಯಮಾನುಸಾರ ಟೆಂಡರ್ ಕರೆದು ನಿರ್ದಿಷ್ಟ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗುತ್ತದೆ. |

**ಸಂಖ್ಯೆ: ಲೋಇ 52 ಬಿಎಲ್‌ಕ್ಯೂ 2025**

**(ಸತೀಶ ಜಾರಕಿಹೊಳಿ),**
ಲೋಕೋಪಯೋಗಿ ಸಚಿವರು.

Scanned with OKEN Scanner